## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 2870/2022

**ಸಾಕ್ಷಿಯನ್ನು ದಿಃ 21.08.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಲವ ಎಂ ಆರ್ | ಸಿಡಬ್ಲ್ಯೂ:38 | ಪಿಡಬ್ಲ್ಯೂ:03 |
| ತಂದೆಯ ಹೆಸರು | ಲೇಟ್ ರಾಮೇಗೌಡ | | |
| ವಯಸ್ಸು | 43 ವರ್ಷ | | |
| ಕೆಲಸ | ಪಿ.ಐ. ವಿ ವಿ ಪುರಂ ಸಂಚಾರ ಪೊಲೀಸ್ ಠಾಣೆ. | | |
| ವಾಸಸ್ಥಳ | ಮೈಸೂರು. | | |

**ದಂಡ ಪ್ರಕ್ರಿಯಾ ಸಂಹಿತೆ 299 ರ ಅಡಿ ವಿಚಾರಣೆ.**
**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿನಾಂಕಃ 06.09.2013 ರಿಂದ 04.12.2015 ರ ವರೆಗೆ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.01.2014 ರಂದು ಕೇಸಿನ ಕಡತವನ್ನು ಚಾಸಾ-37 ರವರಿಂದ ಪಡೆದು ಪರಿಶೀಲಿಸಿ ಅದೇ ದಿನ ತನಿಖೆ ಮುಂದುವರಿಸಿರುತ್ತೇನೆ. ಅದೇ ದಿನ ಕಳ್ಳತನ ವಾಗಿದ್ದ ಹಸುಗಳ ಪತ್ತೆಗಾಗಿ ಚಾಸಾ-21 ಮತ್ತು 22 ರನ್ನು ನೇಮಿಸಿರುತ್ತೇನೆ. ನಂತರ ಸದರಿ ಪ್ರಕರಣದಲ್ಲಿ ಆರೋಪಿಗಳು ವಿವಿಧ ಸ್ಥಳಗಳಲ್ಲಿ ಕೃತ್ಯ ಎಸೆಗಿದ್ದು ಮಹಜರ್ ಸಲುವಾಗಿ ಚಾಸಾ-6 ಮತ್ತು 7 ರವರನ್ನು ಬರಮಾಡಿಕೊಂಡು ಪಂಚರೊಂದಿಗೆ ಮೊದಲಿಗೆ ಕೃತ್ಯ ನಡೆದ ಸ್ಥಳವಾದ ಹುಣಸೂರಿನಲ್ಲಿ ನಂತರ ಹೊಸಲು ಮಾರಮ್ಮ ದೇವಸ್ಥಾನದ ಹತ್ತಿರವಿರುವ ಮಂಗಳೂರು ಮೈಸೂರು ಹೆದ್ದಾರಿಯಲ್ಲಿ ನಂತರ ಮೈಸೂರು ಹಾಸನ ರಸ್ತೆಯ ಕೆ ಆರ್ ನಗರ ಬಳಿ ಎಲ್ ಟಿ ಬಳಿ ಬ್ರಿಡ್ಜ್ ಬಳಿ , ನಂತರ ಮೈಸೂರು ಮಂಗಳೂರು ರಸ್ತೆಯ ಮಲ್ಲಿನಾಥಪುರ ಬಳಿ , ನಂತರ ಮೈಸೂರು ಮಂಗಳೂರು

ರಸ್ತೆಯ ಬಿಳಿಕೆರೆ ಬೈ ಪಾಸ್ ಬಳಿ ಬೆಳಿಗ್ಗೆ 6.45 ರಿಂದ 12.30 ರ ಸಮಯದಲ್ಲಿ ಸ್ಥಳಗಳ ಮಹಜರ್ ಮಾಡಿರುತ್ತೇನೆ.

ಈ ಹಂತದಲ್ಲಿ ಮಹಜರ್ ನ ಪ್ರತಿ ಇಲ್ಲದ ಕಾರಣ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.